ದೇವೇಗೌಡರು ಸ್ಟೇಟ್‌ಮೆಂಟ್ ಕೊಟ್ಟಾಗ ಇಂಥ ಕಟ್ಟಡದ ಅವಶ್ಯಕತೆ ಇಲ್ಲ, ಹಣ ಇಲ್ಲ, ಅದಕ್ಕಾಗಿ ಇಂಥ ಕಟ್ಟಡಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ ಅನೇಕ ತಾಲ್ಲೂಕುಗಳಲ್ಲಿ ಇವತ್ತು ಮುಖ್ಯವಾಗಿ ತಾಲ್ಲೂಕು ಕಚೇರಿ, ಬಿ.ಡಿ.ಓ. ಕಚೇರಿಗಳಿಗೆ ಜನ ಬರುತ್ತಾರೆ, ಅನಂತರ ಎಕ್ಸಿಕ್ಯೂಟಿವ್ ಎಂಜಿನಿಯರ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರ್ ಕಚೇರಿಗೆ ಜನರು ಬರುತ್ತಾರೆ. ಈ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿ. ಈಗ ಕಟ್ಟಡ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕೆಲಸ ಕೈಗೊಳ್ಳುತ್ತೀರೋ ಹೇಗೆ ? ಅಥವಾ ಹಣದ ಕೊರತೆ ಎಂದು ಮುಂದೆ ಹಾಕುತ್ತೀರೋ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆದ್ಯತೆ ಮೇಲೆ ಖರ್ಚು ಮಾಡತಕ್ಕ ನೀತಿ ಇದ್ದರೂ ಕೂಡ ಕಂದಾಯ ಇಲಾಖೆಗೆ ಕಚೇರಿಗಳು ಬೇಕಾಗುತ್ತವೆ. ಆ ದೃಷ್ಟಿಯಿಂದ ಎಲ್ಲೆಲ್ಲಿ ಕಚೇರಿಗಳು ಇಲ್ಲವೋ ಅಲ್ಲಿ ಕಟ್ಟುತ್ತೇವೆ.

ಪ್ರಶ್ನೆ ನಂಬರ್ ೪೧೩ ಮಾನ್ಯ ಸದಸ್ಯರು ಗೈರುಹಾಜರಿ

ಉತ್ತರ ಕನ್ನಡ ಜಿಲ್ಲೆಯಲ್ಲಿ ಅನಧಿಕೃತವಾಗಿ ಮಾಡಿರುವ ಹಾಗೂ ಸಾಗುವಳಿ

೧೦೫ (೧೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೫–೨೦ ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕಿನಲ್ಲಿ ಅನೇಕ ಮಂದಿ ಬಡವರು ಅನಧಿಕೃತವಾಗಿ ಮನೆ ಕಟ್ಟಿಕೊಂಡು ಹಾಗೂ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುವ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಅತಿ ಕ್ರಮಣವನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಕೊಂಡ ಕ್ರಮವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿಯೆ ಅತಿ ಕ್ರಮಣಗಳನ್ನು ಸಕ್ರಮಗೊಳಿಸಲು ಕೈಗೊಂಡ ಕ್ರಮದ ಬಗ್ಗೆ ವಿವರ ಈ ಕೆಳಗಿನಂತಿದೆ.

		ಸಿರ್ಸಿ	ಸಿದ್ದಾಪುರ
೧)	ಈವರೆಗೆ ಅತಿಕ್ರಮಣ ಮಾಡಿರುವವರ ಸಂಖ್ಯೆ	೪೯೬	೪೫
೨)	ಈಗಾಗಲೇ ಸಕ್ರಮಗೊಳಿಸಿದ ಅತಿಕ್ರಮಣಗಳ ಸಂಖ್ಯೆ	೧೨೨	೧೮
೩)	ಬಾಕಿ ಇರುವ ಕಡತಗಳ ಸಂಖ್ಯೆ	೩೭೪	೨೭

ಸರ್ಕಾರದ ಸುತ್ತೋಲೆ ಕ್ರ : ಆರ್‌ಡಿ ೫೨ ಎಲ್‌ಜಿಪಿ ೮೧ ದಿನಾಂಕ ೬–೮–೮೧ರ ಪ್ರಕಾರ ೧–೯–೭೭ರ ಕ್ಕಿಂತ ಮೂರು ವರ್ಷ ಪೂರ್ವದಲ್ಲಿ ಅತಿಕ್ರಮಣ ಮಾಡಿ, ಅತಿಕ್ರಮಣಕಾರರು ಹೆಚ್ಚಳ ಪಡಿ ಖರ್ಚು ಮಾಡಿ, ಮನೆ ಕಟ್ಟಿಕೊಂಡಿದ್ದರೆ ಮತ್ತು ಸದರಿ ಕಟ್ಟಡಗಳನ್ನು ಕೆಡವಿದರೆ ಅಪಾರ ಹಾನಿ ಸಂಭವಿಸುತ್ತಿದ್ದ ಪಕ್ಷದಲ್ಲಿ ಸಕ್ರಮಗೊಳಿಸಬಹುದಾಗಿದೆ, ಬಾಕಿ ಉಳಿದಿರುವ ಪ್ರಕರಣಗಳು ಸದರಿ ಸುತ್ತೋಲೆಯ ಪರಿಮಿತಿಗೆ ಬರುವುದಿಲ್ಲವಾದ್ದರಿಂದ ಬಾಕಿ ಉಳಿದಿರುತ್ತದೆ.

೧೯೮೪ರ ವರೆಗಿನ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ಬಗ್ಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ಮೊರಡಿಸುವ ಬಿಲ್ಲು ಸರ್ಕಾರದ ಪರಿಶೀಲನೆಯಲ್ಲಿದೆ.